ಆ) ಬಂದಿದೆ.

ಆ) ಮಾಗಡಿ ತಾಲ್ಲೂಕಿನ ಕುದೂರಿನಲ್ಲಿ ಒಂದು ಲೆಕ್ಕಪತ್ರ ಶಾಖೆಯನ್ನು ತೆಗೆಯುವ ವಿಷಯವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಪರಿಶೀಲನೆಯಲ್ಲಿದೆ

ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ.

1631 (ಬಿ) ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):- ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುದೂರು ಘಟಕದಲ್ಲಿ ಸಾಕಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಇಲ್ಲದಿರುವುದು ನಿಜವೇ?

ಆ) ಈ ಭಾಗದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಬರುತ್ತಿರುವುದರಿಂದ ಸಾಕಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಸ್.ಎಂ. ಯಾಹ್ಯ (ಕೈಗಾರಿಕಾ, ಇಂಧನ ಮತ್ತು ವಕ್ಫ್ ಸಚಿವರು.):-

ಅ) ಹೌದು.

ಆ) ಕುದೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಸರಬರಾಜಾಗುವ ವಿದ್ಯುತ್ತಿನ ವೋಲ್ಟೇಜ್‌ನ ಗುಣಮಟ್ಟವನ್ನು ಸುಧಾರಿಸಲು ಈಗ ಇರುವ ಫೀಡರ್ ತಂತಿಗಳನ್ನು ಬದಲಾಯಿಸಲು ಕ್ರಮ ತೆಗೆದುಕೊಂಡಿದ್ದು ಈ ಕೆಲಸ ಪ್ರಗತಿಯಲ್ಲಿದೆ.

ಸಣ್ಣ ಪ್ರಮಾಣದ ಕೈಗಾರಿಕೆಗಳ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಆಂಚೆ ಪಾಳ್ಯದಲ್ಲಿ ಒಂದು 8.3 ಎಂ.ವೊ.ಎ. ಸಾಮರ್ಥ್ಯದ 66 -11 ಕೆ.ವಿ. ಉಪಕೇಂದ್ರವನ್ನು 78 ಲಕ್ಷ ರೂ. ಅಂದಾಜು ವೆಚ್ಚದಲ್ಲಿ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಸ್ಥಾಪಿಸಲು ಮಂಡಳಿಯು ಪರಿಶೀಲಿಸುತ್ತಿದೆ.

ಕರ್ನಾಟಕ ರಾಜ್ಯ ಲಾಟರಿ ಟಿಕೆಟುಗಳನ್ನು ಕರ್ನಾಟಕ ರಾಜ್ಯದ ಹೊರಗಡೆ ಮಾರಾಟ ಮಾಡುವ ಬಗ್ಗೆ.

1483 ಶ್ರೀ ಎಂ. ಪೆರಿಕಲ್ ಮಲ್ಲಪ್ಪ (ಚಿಕ್ಕಪೇಟೆ):- ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಪ್ರಸ್ತುತ ಕರ್ನಾಟಕ ರಾಜ್ಯ ಲಾಟರಿ ಟಿಕೆಟುಗಳು ಮಾರಾಟ ಮಾಡಲ್ಪಡುತ್ತಿರುವ ಹೊರ ರಾಜ್ಯಗಳಾವುವು?

2) ಕರ್ನಾಟಕ ರಾಜ್ಯ ಲಾಟರಿ ಟಿಕೇಟುಗಳು ಮಾರಾಟವಾಗುತ್ತಿರುವ ಹೊರ ರಾಜ್ಯಗಳ ಪೈಕಿ ತಮಿಳುನಾಡು, ಆಂಧ್ರಪ್ರದೇಶ ಹಾಗೂ ಗುಜರಾತ್ ರಾಜ್ಯಗಳು ಈ ಟಿಕೇಟುಗಳ ಮಾರಾಟಕ್ಕೆ ಮಾರಾಟ ತೆರಿಗೆಯನ್ನು ವಿಧಿಸುತ್ತಿರುವುದು ನಿಜವೇ?

3) ಒಂದು ವೇಳೆ ಈ ರಾಜ್ಯಗಳು ಮಾರಾಟ ತೆರಿಗೆ ವಿಧಿಸುತ್ತಿದ್ದರೆ, ರಾಜ್ಯ ಸರ್ಕಾರದ ಈ ಬಗ್ಗೆ ತೆಗೆದುಕೊಂಡಿರುವ ಕ್ರಮ ಏನು?

4) ಕರ್ನಾಟಕದಲ್ಲಿ ಮಾರಾಟವಾಗುತ್ತಿರುವ ಹೊರ ರಾಜ್ಯಗಳ ಲಾಟರಿ ಟಿಕೇಟುಗಳ ಮೇಲೆ ಸರ್ಕಾರವು ಮಾರಾಟ ತೆರಿಗೆಯನ್ನು ವಿಧಿಸುತ್ತಿದೆಯೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಆರ್ಥಿಕ, ಅಬಕಾರಿ ಸಚಿವರು):-

1) ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ಗುಜರಾತ್ ಹಾಗೂ ಗೋವಾ.

2) ನಿಜ.

3) ರಾಜ್ಯ ಸರ್ಕಾರವು ಈ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

4) ಇಲ್ಲ.

ರಾಜ್ಯದಲ್ಲಿನ ಸಣ್ಣ ಪ್ರಮಾಣದ ಕೈಗಾರಿಕೆಗಳ ಬಗ್ಗೆ.

1636 ಶ್ರೀ ಶಫೀ ಅಹಮದ್, (ತುಮಕೂರು):- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಪ್ರಾರಂಭವಾದ ಸಣ್ಣ ಪ್ರಮಾಣದ ಕೈಗಾರಿಕೆಗಳೆಷ್ಟು?

ಆ) ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಈ ಕೈಗಾರಿಕೆಗಳಿಗೆ ನೀಡಿರುವ ಒಟ್ಟು ಹಣವೆಷ್ಟು?

ಇ) ಕೇಂದ್ರ ಹಾಗೂ ರಾಜ್ಯಸರ್ಕಾರಗಳಿಂದ ಈ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಕೊಟ್ಟಿರುವ ಒಟ್ಟು ಧನಸಹಾಯವೆಷ್ಟು ಮತ್ತು ಇನ್ನು ಬಾಕಿ ಕೊಡಬೇಕಾಗಿರುವ ಸಹಾಯಧನವೆಷ್ಟು?

ಈ) ಮೇಲಿನ ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಕಾರ್ಯ ಮಾಡದೇ ಇರುವ ಕೈಗಾರಿಕೆಗಳೆಷ್ಟು? (ವಿವರಗಳನ್ನು ಕೊಡಿ)

ಉ) ಈ ಘಟಕಗಳನ್ನು ಪುನಃ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀಮತಿ ಸುಮಾ ವಸಂತ (ಸಣ್ಣ ಪ್ರಮಾಣದ ಕೈಗಾರಿಕೆಗಳ ಉಪ ಸಚಿವೆಯರು.)

ಅ) ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ ಪ್ರಾರಂಭವಾದ ಸಣ್ಣ ಪ್ರಮಾಣದ ಕೈಗಾರಿಕೆಗಳು ಈ ಕೆಳಗಿನಂತಿವೆ:-

ವರ್ಷ	ಸಣ್ಣ ಪ್ರಮಾಣದ ಕೈಗಾರಿಕೆಗಳು
1987-88	10,530
1988-89	9,811
1989-90	9,700
ಒಟ್ಟು	30,041

ಆ) ರೂ. 327.35 ಲಕ್ಷಗಳು

ಇ) ವರ್ಷ	ರಾಜ್ಯ ಸಹಾಯಧನ	ಕೇಂದ್ರಸಹಾಯಧನ
1987-88	ರೂ. 130.02 ಲಕ್ಷ	ರೂ.149.38 ಲಕ್ಷ
1988-89	ರೂ. 166.26 ಲಕ್ಷ	ರೂ. 475.00 ಲಕ್ಷ
1989-90	ರೂ. 297.30 ಲಕ್ಷ	ರೂ. 1,332.14 ಲಕ್ಷ
ಒಟ್ಟು	ರೂ.593.58 ಲಕ್ಷ	ರೂ. 1,956.52 ಲಕ್ಷ

ಬಾಕಿ ಕೊಡಬೇಕಾಗಿರುವ ಸಹಾಯಧನ

ರೂ. 1,375.92 ಲಕ್ಷಗಳು.

ಈ) ಭಾರತೀಯ ರಿಜರ್ವ್ ಬ್ಯಾಂಕ್ ಮಾರ್ಗದರ್ಶನದಂತೆ ಸಣ್ಣ ಪ್ರಮಾಣದ ಕೈಗಾರಿಕೆಗಳ ಉತ್ಪಾದನಾ ದಿನದಿಂದ 5 ವರ್ಷಗಳವರೆಗೆ ಆರ್ಥಿಕ ಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಘಟಕವು ರೋಗಗ್ರಸ್ಥವೊ : ಕೆಲಸ ಮಾಡದ ಘಟಕವೊ ಎಂದು ಪರಿಗಣಿಸಲಾಗುವುದು. ಆದ್ದರಿಂದ,